

# ಕೀರ್ತಿ ಜತೆ ಜಾಹ್ನವಿ ಕಾಲಕ್ಷೇಪ

ಹಿಂದಿ ಸಿನಿಮಾದವರಿಗೂ ದಕ್ಷಿಣ ಭಾರತದ ಸಿನಿಮಾದವರಿಗೂ ಮೊದಲು ಒಂದು ಕಂದಕವಿತ್ತು. ಅದರಲ್ಲೂ ದಕ್ಷಿಣ ಭಾರತದ ನಟಿಯರು ಅಲ್ಲಿ ಅಭಿನಯಿಸಿದರಷ್ಟೆ ಮನ್ನಣೆ ಎನ್ನುವ ಕಾಲವಿತ್ತು. ಈಗ ದಕ್ಷಿಣ ಭಾರತದ ಸಿನಿಮಾಗಳು ಸದ್ದು ಮಾಡುತ್ತಿರುವಂತೆ ಹಿಂದಿ–ತೆಲುಗು ನಟಿಯರು ಸ್ನೇಹಿತೆಯರಂತೆ ದಿನ ಕಳೆದ ಸುದ್ದಿಯೊಂದು ಹೊರಬಿದ್ದಿದೆ. ನಟಿ ಶ್ರೀದೇವಿ ಅವರ ಮಗಳು ಜಾಹ್ನವಿ ಕಪೂರ್ ಹೈದರಾಬಾದ್‌ನಲ್ಲಿ ಇತ್ತೀಚೆಗೆ ತಮ್ಮ 'ಮಿಲಿ' ಸಿನಿಮಾ ಪ್ರಚಾರ ಮಾಡಿದರು. ಆಗ ಅವರ ಜತೆ ದಿನ ಕಳೆದವರು ಕೀರ್ತಿ ಸುರೇಶ್.

ಕೀರ್ತಿ ಸುರೇಶ್ ಕೈಲೀಗ ಮೂರು ಸಿನಿಮಾಗಳಿವೆ. 'ವಾಶಿ' ಎಂಬ ಮಲಯಾಳಂ ಸಿನಿಮಾ ತೆರೆಕಾಣಲು ಸಿದ್ಧವಾಗಿದೆ. ಕೋರ್ಟ್ ರೂಮ್ ಡ್ರಾಮಾ ಇರುವ ಆ ಸಿನಿಮಾ ಕುರಿತು ನಿರೀಕ್ಷೆ ಇಟ್ಟುಕೊಂಡಿರುವ ಅವರು ತೆಲುಗಿನಲ್ಲಿ 'ದಸರಾ' ಎನ್ನುವ ಸಿನಿಮಾ ಚಿತ್ರೀಕರಣದಲ್ಲಿ ತೊಡಗಿದ್ದಾರೆ. ತಮಿಳಿನಲ್ಲಿ ಮಾರಿ ಸೆಲ್ವರಾಜ್ ನಿರ್ದೇಶಿಸಲಿರುವ 'ಮಾಮಣ್ಣನ್' ಚಲನಚಿತ್ರದಲ್ಲಿ ಫಹಾದ್ ಫಾಸಿಲ್ ಅವರೊಟ್ಟಿಗೆ ನಟಿಸುವುದೂ ನಿಕ್ಕಿಯಾಗಿದೆ. ಇಷ್ಟೆಲ್ಲ ಕೆಲಸಗಳ ನಡುವೆಯೇ ಅವರು ಬಿಡುವು ಮಾಡಿಕೊಂಡು, ಜಾಹ್ನವಿ ಕಪೂರ್ ಜತೆ ಕಾಲ ಕಳೆದರು.

ಇಬ್ಬರೂ ಒಟ್ಟಿಗೆ ತೆಗೆಸಿಕೊಂಡ ಫೋಟೊಗಳನ್ನು ಇನ್‌ಸ್ಟಾಗ್ರಾಂ ಖಾತೆಗಳಲ್ಲಿ ಹಂಚಿಕೊಂಡರು. 'ಮಿಲಿ' ಸಿನಿಮಾಗೆ ಒಳ್ಳೆಯ ಓಪನಿಂಗ್ ಸಿಗಲಿ ಎಂದು ಕೀರ್ತಿ ಹಾರೈಸಿದರೆ, ಸಂದರ್ಶನಗಳಲ್ಲಿ ಓದಿದ್ದ ಪ್ರತಿಭಾವಂತ ನಟಿಯ ಜತೆಗೆ ಅಷ್ಟೆಲ್ಲ ಮಾತನಾಡುವ ಅವಕಾಶ ಸಿಕ್ಕಿದ್ದು ಖುಷಿಯಾಯಿತು ಎಂಬರ್ಥದ ಒಕ್ಕಣೆಯನ್ನು ಜಾಹ್ನವಿ ಬರೆದುಕೊಂಡಿದ್ದಾರೆ. ಮಲಯಾಳಂನಲ್ಲಿ ಬಂದಿದ್ದ 'ಹೆಲೆನ್' ಸಿನಿಮಾದ ರೀಮೇಕ್ 'ಮಿಲಿ'. ಇದಲ್ಲದೆ 'ಬವಾಲ್' ಹಾಗೂ 'ಮಿಸ್ಟರ್ ಅಂಡ್ ಮಿಸಸ್ ಮಹಿ' ಎನ್ನುವ ಸಿನಿಮಾಗಳಿಗೂ ಜಾಹ್ನವಿ ಸಹಿ ಹಾಕಿದ್ದಾರೆ. ಶ್ರೀದೇವಿ ದಕ್ಷಿಣ ಭಾರತದ ನಟಿಯಾಗಿದ್ದರೂ ಹಿಂದಿ ಚಿತ್ರರಂಗದಲ್ಲಿಯೂ ಸದ್ದು ಮಾಡಿದ್ದವರು. ಕೀರ್ತಿ ಗಳಿಸಿರುವ ಯಶಸ್ಸನ್ನು ಜಾಹ್ನವಿ ಅದಕ್ಕೆ ಸಮೀಕರಿಸಿರುವುದೂ ಅರ್ಥಪೂರ್ಣ. ■

# ನಿತ್ಯಾ, ಪಾರ್ವತಿ ತಾವು ಪ್ರೆಗ್ನೆಂಟ್ ಎಂದಾಗ...

ಸಿನಿಮಾ ಪ್ರಚಾರದ ತಂತ್ರಕ್ಕೆ ಏನೆಲ್ಲ ಮಾರ್ಗಗಳನ್ನು ಹುಡುಕುತ್ತಾರೆನ್ನುವುದಕ್ಕೆ ಕೆಲವು ದಿನಗಳ ಹಿಂದೆ ಅತ್ಯುತ್ತಮ ಉದಾಹರಣೆ ಕಂಡಿತು. ಪಾರ್ವತಿ ತಿರುವೊಟ್ಟು ಹಾಗೂ ನಿತ್ಯಾ ಮೆನನ್ ಇಬ್ಬರೂ ತಮ್ಮ ತಮ್ಮ ಇನ್‌ಸ್ಟಾಗ್ರಾಂ ಖಾತೆಗಳಲ್ಲಿ ಗರ್ಭಧಾರಣೆ ಪರೀಕ್ಷೆಯ ಫಲಿತಾಂಶ ಎನ್ನುವಂಥ ಪೋಸ್ಟ್ ಹಾಕಿದ್ದರು. 'ಹ್ಯಾಪಿ ಟು ಅನೌನ್ಸ್ ಐ ಆ್ಯಮ್ ಪ್ರೆಗ್ನೆಂಟ್' ಎನ್ನುವ ಒಕ್ಕಣಿಕೆ ಇದ್ದಿದ್ದರಿಂದ ನೆಟ್ಟಿಗರಲ್ಲಿ ಅನೇಕರು ಚಕಿತರಾದರು. ಕೆಲವರು ಶುಭಾಶಯ ಕೋರಿದರು. ಬೆರಳೆಣಿಕೆಯ ಅಭಿಮಾನಿಗಳಷ್ಟೆ 'ಇದು ಅನುಮಾನ ಪಡಬೇಕಾದ ಸುದ್ದಿ' ಎಂದು ಪ್ರತಿಕ್ರಿಯಿಸಿದರು.



ನಿತ್ಯಾ ಮೆನನ್

ಇನ್ನೂ ಮದುವೆಯಾಗದ ಇಬ್ಬರೂ ನಟಿಯರು ಏಕಾಏಕಿ ತಾವು ಗರ್ಭಿಣಿಯರಾಗಿದ್ದೇವೆ ಎಂದು ಘೋಷಿಸಿದರೆ ಜಾಲತಾಣಗಳಿಗೆ ಚರ್ಚಿಸಲು ಪುಕ್ಕಟೆ ಆಹಾರ ಸಿಕ್ಕಂತೆಯೇ ಸರಿ.

ಬರೀ ಪ್ರೆಗ್ನೆನ್ಸಿ ಟೆಸ್ಟ್ ಟೂಲ್‌ನ ಚಿತ್ರವನ್ನಷ್ಟೆ ಅಲ್ಲದೆ, 'ಅಂಡ್, ದಿ ವಂಡರ್ ಬಿಗಿನ್ಸ್' ಎಂಬ ಇನ್ನೊಂದು ಸಾಲೂ ಅವರ ಇನ್‌ಸ್ಟಾಗ್ರಾಂ ಪೋಸ್ಟ್‌ನ ಜತೆಗೆ ಇತ್ತು. ಈ ಪೋಸ್ಟ್ ಹಾಕಿದ ಕೆಲವೇ ನಿಮಿಷಗಳ ನಂತರ ಅನೇಕರು ಶುಭಾಶಯ ಕೋರಿದ್ದನ್ನು ಓದಿದ ಇನ್ನೊಬ್ಬ ನಟಿ ಸ್ವರಾ ಭಾಸ್ಕರ್, 'ಓ ಮೈ ಗಾಡ್... ಸೋ ಮೆನಿ ಕಂಗ್ರಾಚ್ಯುಲೇಷನ್ಸ್ ಮೈ ಲವ್ಲಿ' ಎಂದು ಪ್ರತಿಕ್ರಿಯಿಸಿದರು. ಮದುವೆಯಾಗದವರು ತಮ್ಮಿಚ್ಛೆಯಂತೆ ತಾಯಿಯಾದ ಸುದ್ದಿ ಬಂದರೂ ಶುಭಾಶಯ ಹೇಳುವವರಿದ್ದಾರಲ್ಲ ಎಂಬ ಸಮಾಧಾನ ಅವರ ಪ್ರತಿಕ್ರಿಯೆಯಲ್ಲಿ ಇತ್ತು. ಲಿಸಾ ಮಿಶ್ರಾ ಎಂಬ ಇನ್ನೊಬ್ಬ ನಟಿ, 'ವಾಟ್ ವಾಟ್ ವಾಟ್... ನಾನು ಚಿಕ್ಕಮ್ಮ ಆಗುತ್ತಿರುವೆನಾ?' ಎಂದು ಪ್ರತಿಕ್ರಿಯಿಸಿದ್ದನ್ನು ಓದಿ ಎಷ್ಟೋ ಜನ ನಕ್ಕಿದ್ದರು. 'ವಂಡರ್ ವುಮೆನ್' ಎಂಬ ಸಿನಿಮಾದಲ್ಲಿ ಪಾರ್ವತಿ ಹಾಗೂ ನಿತ್ಯಾ ಒಟ್ಟಾಗಿ ಅಭಿನಯಿಸುತ್ತಿದ್ದು, ಅದರ ಪ್ರಚಾರದ ಭಾಗವಾಗಿ ಅನುಸರಿಸಿದ ತಂತ್ರವಿದು ಎನ್ನುವುದು ಬೇಗ ಎಲ್ಲರಿಗೂ ತಿಳಿಯಿತು. ■



ಪಾರ್ವತಿ